

**ಊಟಕ್ಕಾಗಿ, ಓಓಡಿ ಗಾಗಿ ಜಗಳ ಇಲ್ಲದೆ ಸಾಹಿತ್ಯ ಸಮಾವೇಶಗಳು ನಡೆಯಬೇಕು. ಊಟವಿಲ್ಲದ ಸಮ್ಮೇಳನವನ್ನೂ ಮಾಡಬಹುದು.**

**82ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಬರಗೂರು ರಾಮಚಂದ್ರಪ್ಪ ಅವರ ಸಂದರ್ಶನ**

# ಸಾಹಿತ್ಯಕ್ಷೇತ್ರವೂ ವಿಶ್ವಾಸಾರ್ಹತೆ

★ **ಸಾಹಿತ್ಯ ಸಮ್ಮೇಳನ ಪ್ರತಿವರ್ಷದ ಜಾತ್ರೆ ಎಂಬಂತಾಗಿದೆ. ಈ ರೀತಿಯ ಜಾತ್ರೆಗಳಿಂದ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗೆ ಏನಾದರೂ ಪ್ರಯೋಜನ ಆಗುತ್ತದೆ ಎಂದು ನೀವು ಭಾವಿಸಿದ್ದೀರಾ?**

ನೀವು ಜಾತ್ರೆ ಅನ್ನಿ ಅಥವಾ ಉತ್ಸವ ಅನ್ನಿ ಸಮ್ಮೇಳನದ ಈ ಸ್ವರೂಪವನ್ನು ನಾವು ತಪ್ಪಿಸೋಕಾಗೋದಿಲ್ಲ. ಪ್ರತಿ ವರ್ಷವೂ ಈ ಸಮ್ಮೇಳನಕ್ಕೆ ಹೋಗುವವರಿದ್ದಾರೆ. 23 ವರ್ಷಗಳಿಗೊಮ್ಮೆ ಹೋಗುವವರೂ ಇದ್ದಾರೆ. ಅಲ್ಲಿಗೆ ಕೇವಲ ಸಾಹಿತಿಗಳು ಮಾತ್ರ ಹೋಗೋದಲ್ಲ, ಜನಸಾಮಾನ್ಯರೂ ಹೋಗುತ್ತಾರೆ. ಅಲ್ಲಿ ಒಂದೇ ರೀತಿಯ ಜನ ಬರೋದಿಲ್ಲ. ವಿಭಿನ್ನ ಅಭಿರುಚಿಗಳವರು ಬರುತ್ತಾರೆ. ಅವರಲ್ಲಿ ಹಲವು ನಿರೀಕ್ಷೆಗಳಿರುತ್ತವೆ. ಜನಸಾಮಾನ್ಯರು ಮತ್ತು ಸಾಹಿತಿಗಳ ನಡುವೆ ಒಂದು ಕಂದರ ನಿರ್ಮಾಣವಾಗಿದೆ ಎನ್ನುವುದು ನಿಜ. ನಾವು ಸಾಹಿತಿಗಳು ನಮ್ಮ ಮಧ್ಯೆಯೇ ಚರ್ಚೆ ನಡೆಸುತ್ತೇವೆ. ಈ ಚರ್ಚೆ, ಸಂವಾದ ಜನಸಾಮಾನ್ಯರಿಗೆ ತಲುಪಬೇಕು. ನಮ್ಮ ಭಾಷೆ ಮತ್ತು ಬದುಕಿನ ನಡುವೆಯೂ ಅಂತರವಿದೆ. ಇಲ್ಲಿ ಹೋರಾಟಗಾರ ಬೇರೆ, ಚಿಂತಕ ಬೇರೆ. ಅವರ ನಡುವೆಯೂ ಅಂತರವಿದೆ. ಈ ಅಂತರವನ್ನು ಉಲ್ಲಂಘಿಸುವ ಚರ್ಚೆ ನಡೆಯಬೇಕು.

ಈ ನಿಟ್ಟಿನಲ್ಲಿ ಸಾಹಿತ್ಯ ಸಮ್ಮೇಳನಗಳಲ್ಲಿ ನಡೆಯುವ ಚರ್ಚೆಗಳನ್ನು ಗಮನಿಸಿ. ಮುಖ್ಯ ವೇದಿಕೆಯಲ್ಲಿ ನಡೆಯವುದು ಸಮೂಹ ಕಾರ್ಯಕ್ರಮ. ಅದೇ ಸಮಾನಾಂತರ ವೇದಿಕೆಯಲ್ಲಿ ಹೆಚ್ಚು ಗಂಭೀರ ಚರ್ಚೆ ನಡೆಯುತ್ತದೆ. ಸಾಹಿತ್ಯ ಸಮ್ಮೇಳನದಲ್ಲಿ ರಾಜ್ಯದ ಎಲ್ಲ ಸಮಸ್ಯೆಗಳನ್ನೂ ಚರ್ಚಿಸುತ್ತೇವೆ. ಆದರೆ ಅದು ಸಾಹಿತ್ಯ, ಬದುಕು ಮತ್ತು ಸಂಸ್ಕೃತಿಗೆ ಸಂಬಂಧಿಸಿರಬೇಕು. ಅಲ್ಲಿಯ ಚರ್ಚೆ ರೈಲು ಹಳಿಗಳ ತರಹ ಸಮಾನಾಂತರ ಆಗಬಾರದು, ಅಂತರಸಂಬಂಧೀ ಚರ್ಚೆಗಳು ನಡೆಯಬೇಕು.

★ **ಸಾಹಿತ್ಯ ಸಮ್ಮೇಳನಗಳು ಹೀಗೆ ಹೆಚ್ಚು ಅರ್ಥಪೂರ್ಣವಾಗಲು ನೀವು ಸೂಚಿಸುವ ಸಲಹೆಗಳೇನು?**

ಊಟಕ್ಕಾಗಿ, ಓಓಡಿ ಗಾಗಿ ಜಗಳ ಇಲ್ಲದೆ ಸಮಾವೇಶಗಳು ನಡೆಯಬೇಕು. ಸಾಧ್ಯವಾದರೆ ಊಟವಿಲ್ಲದ ಸಮ್ಮೇಳನವನ್ನೂ ಮಾಡಬಹುದು. ಸಮ್ಮೇಳನಗಳಲ್ಲಿ ಭಾಗವಹಿಸುವವರಿಗೆ ದುಡ್ಡು ಕೊಟ್ಟರೆ ಬೇಕಾದ ರೀತಿಯ ಊಟ ಸಿಗುವಂತೆ ಮಾಡಬಹುದು. ಪುಸ್ತಕ ಮಳಿಗೆಗಳು ಇದ್ದಂತೆಯೇ